ಅ) ಈ ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಲಾಭದಾಯಕವಾಗಿ ನಡೆಯುತ್ತಿರುವ ಸಂಘಗಳೆಷ್ಟು? ನಷ್ಟವನ್ನು ಅನುಭವಿಸುತ್ತಿರುವ ಸಂಘಗಳೆಷ್ಟು?

ಇ) ಸದರಿ ನಷ್ಟವನ್ನು ಅನುಭವಿಸುತ್ತಿರುವ ಸಂಘಗಳ ಅಭಿವೃದ್ಧಿಗೆ ಸರ್ಕಾರದವರು ಯಾವ ಕ್ರಮ ಕೈಗೊಳ್ಳಲಿದ್ದಾರೆ.

ಶ್ರೀ ಎಸ್.ಎಸ್.ಪಟೇಲ್ (ಸಹಕಾರ ಸಚಿವರು):-

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 113 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿವೆ.

ಆ) 1994-95ನೇ ಲೆಕ್ಕ ಪರಿಶೋಧನೆ ವರದಿಗಳನ್ವಯ 85 ಸಹಕಾರ ಸಂಘಗಳು ಲಾಭದಲ್ಲಿ ನಡೆಯುತ್ತಿವೆ. ಹಾಗೂ 32 ಸಹಕಾರ.ಸಂಘಗಳು ನಷ್ಟದಲ್ಲಿವೆ.

ಇ) ಆಯ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ವ್ಯಾಪಾರಾಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದೆ. 1995-96ನೇ ಸಾಲಿನಲ್ಲಿ 84 ಸಂಘಗಳನ್ನು ವ್ಯಾಪಾರಾಭಿವೃದ್ಧಿ ಯೋಜನೆಗಾಗಿ ಆಯ್ಕೆ ಮಾಡಿದ್ದು, ಇವು ಈ ಸಾಲಿನಲ್ಲಿ 1994-95ನೆ ಸಾಲಿನ ವ್ಯವಹಾರಕ್ಕಿಂತ ಶೇಕಡ 26ರಷ್ಟು ಹೆಚ್ಚು ವ್ಯವಹಾರ ಮಾಡಿದೆ. ಇದಲ್ಲದೇ ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆಯಲ್ಲಿ 2.31 ಕೋಟಿ ರೂ.ಗಳ ಧನ ಸಹಾಯವನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ನೀಡಲಾಗಿದೆ.

ವಿಷಯ:- ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಬಡ್ಡಿ ಮನ್ನಾ ಮಾಡಿದ ಹಣ ಮೊತ್ತ.

ಚುಕ್ಕೆ ರಹಿತ ಪ್ರಶ್ನೆ 576 (1261)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು.ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯ ಸಹಕಾರ ಕ್ಷೇತ್ರದಲ್ಲಿ ರೈತರು ಪಡೆದಿರುವಂತಹ ಸಾಲದ ಮೇಲೆ ಬಡ್ಡಿ ಮನ್ನಾ ಮಾಡಿರುವ ಹಣವೆಷ್ಟು?

ಆ) ಇಲ್ಲಿಯವರೆಗೆ ಸರಕಾರದವರು ಎಷ್ಟು ಹಣ ಬಿಡುಗಡೆ ಮಾಡಿರುವರು?

ಇ) ಸರಕಾರದವರಿಂದ ಬಡ್ಡಿ ಮೇಲಿನ ಬಾಬ್ತು ಇನ್ನು ಎಷ್ಟು ಉಳಿದ ಹಣ ಪಾವತಿ ಮಾಡಬೇಕಾಗಿದೆ ಹಾಗೂ ಉಳಿದ ಹಣ ಎಂದು ಪಾವತಿ ಮಾಡಲಾಗುವುದು?

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು):-

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಹಾಗೂ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಭಿವೃದ್ಧಿ ಬ್ಯಾಂಕುಗಳಿಗೆ ರೈತ

ಸದಸ್ಯರು 1995ನೇ ಸಾಲಿನಲ್ಲಿ ಮರುಪಾವತಿ ಮಾಡಿದ ಹಣದ ಮೇಲೆ ರೂ.290.99 ಲಕ್ಷಗಳ ಬಡ್ಡಿ ಸಹಾಯಧನದ ಸೌಲಭ್ಯ ಒದಗಿಸಿದೆ.

ಆ) ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ 221.51 ಲಕ್ಷ ರೂ.ಗಳು ಬಿಡುಗಡೆ ಆಗಿದೆ.

ಇ) ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು 69.48 ಲಕ್ಷ ರೂ.ಗಳು ಬಿಡುಗಡೆ ಮಾಡಲು ಬಾಕಿ ಉಳಿದಿರುತ್ತದೆ. ಉಳಿದ ಹಣವನ್ನು ಆದಷ್ಟು ಶೀಘ್ರವಾಗಿ ಪಾವತಿ ಮಾಡಲಾಗುವುದು.

ವಿಷಯ:- ಶಿವಳ್ಳಿ ಗ್ರಾಮದಲ್ಲಿ ಸರಕಾರಿ ಭೂಮಿಯಲ್ಲಿ ಅಕ್ರಮ ಕಟ್ಟಡ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 579 (1251)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಮಣಿಪಾಲಕ್ ಶಿವಳ್ಳಿ ಗ್ರಾಮದಲ್ಲಿ ರಾಷ್ಟ್ರೀಕೃತ ಸಿಂಡಿಕೇಟ್ ಬ್ಯಾಂಕ್ ಸರ್ಕಾರದ ಲೋಪದಿಂದ ತರಬೇತಿ ಕೇಂದ್ರ ಕಟ್ಟಡವನ್ನು ಸರ್ಕಾರಿ ಭೂಮಿಯಲ್ಲಿ ಕಟ್ಟಿದ ಬಗ್ಗೆ ಅದನ್ನು ಅಕ್ರಮವೆಂದು ಸಾರಲಾಗಿದೆಯೆ.

ಆ) ಹಾಗಿದ್ದಲ್ಲಿ ಸರ್ಕಾರವು ರಾಷ್ಟ್ರೀಕೃತ ಬ್ಯಾಂಕಿನ ಮೇಲೆ ಕೈಗೊಂಡ ಕ್ರಮಗಳೇನು.

ಇ) ಅಕ್ರಮವೆಂದು ಸರ್ಕಾರವು ಸಾರಲಾದ ಸರ್ಕಾರಿ ಭೂಮಿಯಲ್ಲಿ ಬ್ಯಾಂಕ್ ಕಟ್ಟಿದ ಕಟ್ಟಡದ ಮೇಲೆ ದಂಡನಾ ಶುಲ್ಕ ವಿಧಿಸಿದೆಯೆ?

ಈ) ಈ ದಂಡನಾ ಶುಲ್ಕ ಉಡುಪಿ ಉಪನೋಂದಣಾಧಿಕಾರಿ ಕಛೇರಿಯಲ್ಲಿ ದಾಖಲಾದ ನಿಗದಿಪಡಿಸಿದ ಸ್ಥಳ ಮೌಲ್ಯಕ್ಕಿಂತ ಎಷ್ಟು ನಿಗದಿಪಡಿಸಿದಕ್ಕಿಂತ ಎಷ್ಟು ಪಟ್ಟು ಹೆಚ್ಚು ದಂಡನಾ ಶುಲ್ಕ ವಿಧಿಸಲಾಗಿದೆ? ವಿವರ ನೀಡುವುದು.

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) ಸಿಂಡಿಕೇಟ್ ಬ್ಯಾಂಕ್‌ನವರು ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಸರ್ವೆ ನಂ.51ರಲ್ಲಿ 5-05 ಎಕರೆ ಸರ್ಕಾರಿ ಜಮೀನನಲ್ಲಿ ಕಟ್ಟಡ ಕಟ್ಟಿದ್ದು, ಸರ್ಕಾವು ಸದರಿ ಸರ್ಕಾರಿ ಜಮೀನಿಗೆ ಎಕರೆ ಒಂದಕ್ಕೆ ರೂ. 75 ಲಕ್ಷ ಬೆಲೆ ವಿಧಿಸಿ ಮತ್ತು ಅನಧಿಕೃತ ಕಟ್ಟಡಕ್ಕೆ ರಾಜಿ ಶುಲ್ಕ (ದಂಡ) ವಿಧಿಸಿ ಹಾಗೂ ನಿಯಮಾನುಸಾರ ಇತರೆ ಶುಲ್ಕವನ್ನು ವಿಧಿಸಿ ಆದೇಶ ಸಂಖ್ಯೆ : ಆರ್‌ಡಿ 14 ಎಲ್‌ಜಿಎ 95 ದಿನಾಂಕ 2.2.96ರಲ್ಲಿ ಮಂಜೂರು ಮಾಡಿದೆ.

ಆ) ಉದ್ಭವಿಸುವುದಿಲ್ಲ.